# “ಮಹಿಮೆಯಲ್ಲಿ ಪ್ರವೇಶಿಸಿದನು”[1]

## ಮಾರ್ಕ 16:19; ಲೂಕ 24:50-53; ಅಪೊಸ್ತಲರ ಕೃತ್ಯಗಳು 1:9-12, ಒಂದು ನಿಕಟ ನೋಟ

ನಾವು ಕ್ರಿಸ್ತನ ಜೀವನದ ಸ್ವಾಭಾವಿಕ ಮುಕ್ತಾಯಕ್ಕೆ ಬಂದಿದ್ದೇವೆ: ಆತನ ಆರೋಹಣ. ತನ್ನ ಶಿಷ್ಯರಿಗೆ ಆತನ ಅಂತಿಮ ಮಾತುಗಳಲ್ಲಿ ಯೇಸು ಹೀಗೆ ಹೇಳಿದ್ದಾನೆ, ಆತನ ಶ್ರಮೆಯೊಂದಿಗೆ ಮಹಿಮೆಯು ಬರುವದೆಂದು - ಅದು ಆರೋಹಣವಾದಾಗ ಸಂಭವಿಸಿತು: “ಕ್ರಿಸ್ತನು ಇಂಥ ಶ್ರಮೆಗಳನ್ನು ಅನುಭವಿಸಿ *ಮತ್ತು* ತನ್ನ ಮಹಿಮೆಯಲ್ಲಿ ಪ್ರವೇಶಿಸುವುದು ಅಗತ್ಯವಾಗಿತ್ತಲ್ಲವೆ?” (ಲೂಕ 24:26; ಒತ್ತಿ ಹೇಳಿದ್ದು ನನ್ನದು). ಪೌಲನ ಬರಹದಲ್ಲಿ ದೇವರ ಶ್ರೇಷ್ಠವಾದ ಬಲಾತಿಶಯ ಯಾವುದೆಂದರೆ “ಆತನು ಸತ್ತಿದ್ದ ಕ್ರಿಸ್ತನನ್ನು ಬದಕಿಸಿ *ಮತ್ತು* ಪರಲೋಕದಲ್ಲಿ ತನ್ನ ಬಲಗಡೆಯಲ್ಲಿ ಕೂರಿಸಿಕೊಂಡನು” (ಎಫೆಸ 1:20; ಒತ್ತಿ ಹೇಳಿದ್ದು ನನ್ನದು).

ಆರೋಹಣವು ಕ್ರಿಸ್ತನ ಜೀವನದ ಸ್ವಾಭಾವಿಕವಾದ ಮುಕ್ತಾಯವಾಗಿದೆ ಯಾಕೆಂದರೆ ಆತನು ಪರಲೋಕದಿಂದ ಬಂದಾಗಿನಿಂದ ಆತನು ತಿರುಗಿ ಹೋಗಬೇಕಾಗಿತ್ತು. “ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನಷ್ಯರನ್ನು ಉಂಟು ಮಾಡೋಣ” (ಆದಿಕಾಂಡ 1:26ಎ) ಎಂದು ದೇವರು ಹೇಳಿದ ಅರ್ಥಕ್ಕೆ ಯೇಸುವಿನ ಜೀವನ ಪ್ರದರ್ಶಿತವಾದದ್ದರಿಂದ ಇದು ಸ್ವಾಭಾವಿಕವಾದ ಮುಕ್ತಾಯವಾಗಿತ್ತು. ಇದರಿಂದಾಗಿ, ಮನುಷ್ಯನು ಎದೆನ್ ತೋಟದಲ್ಲಿ ಅನುಭವಿಸಿದ ದೇವರ ಸಂಪೂರ್ಣ ಅನ್ಯೋನ್ಯತೆಗೆ ಯೇಸು ತಿರುಗಿ ಸೇರುವುದು ಅರ್ಥವುಳ್ಳದ್ದಾಗಿದೆ.

ಆತನ ಆರೋಹಣದ ಕುರಿತು ಸತ್ಯವೇದ ಏನನ್ನು ಬೋಧಿಸುತ್ತದೆ ಎಂಬುದನ್ನು ನಾವು ಅಧ್ಯಯನ ಮಾಡುವಾಗ, ನಾವು ಸಂಪೂರ್ಣವಾಗಿ ಅದನ್ನು ಗ್ರಹಿಸಿಕೊಂಡಿಲ್ಲ ಎನ್ನುವಂಥದ್ದನ್ನು ಒಪ್ಪಿಕೊಳ್ಳಬೇಕು. ಉದಾಹರಣೆಯಾಗಿ, ಪರಲೋಕದ ಹೆಬ್ಬಾಗಿಲಿನೊಳಗೆ ಪ್ರವೇಶ ಮಾಡಲು ಯೇಸುವಿನ ಪುನರುತ್ಥಾನದ ದೇಹ (“ದೇಹ ಮತ್ತು ಎಲುಬುಗಳೊಂದಿಗೆ”[2] ಇನ್ನೆಂತಹಾ ರೀತಿಯಲ್ಲಿ ಮಾರ್ಪಾಡು ಹೊಂದಿತು? ಹೊಸ ಒಡಂಬಡಿಕೆ ಇದರ ವಿಷಯದಲ್ಲಿ ಮತ್ತು ಇತರ ಪ್ರಶ್ನೆಗಳಿಗೆ ಉತ್ತರ ಕೊಡುವುದಿಲ್ಲ. ವಾಕ್ಯವು ಆರೋಹಣದ ಕುರಿತು ವರ್ಣಿಸುತ್ತದೆ ಆದರೆ ಅದನ್ನು ವಿವರಿಸಲು ಯಾವುದೆ ಪ್ರಯತ್ನ ಮಾಡಿರುವುದಿಲ್ಲ. ನಿಜವಾದ ಘಟನೆಗಳನ್ನು ತಿಳಿಸುವ ಮೂರು ವಾಕ್ಯ ಭಾಗಗಳು ಇಲ್ಲಿವೆ:

> ಆತನು ಅವರನ್ನು ಬೇಥಾನ್ಯದ ತನಕ ಕರೆಕೊಂಡು ಹೋಗಿ ತನ್ನ ಕೈಗಳನ್ನು ಎತ್ತಿ ಅವರನ್ನು ಆಶೀರ್ವದಿಸಿದನು. ಆಶೀರ್ವದಿಸುತ್ತಿರುವಾಗ ಆತನು ಅವರನ್ನು ಬಿಟ್ಟು (ಪರಲೋಕಕ್ಕೆ ಒಯ್ಯಲ್ಪಟ್ಟನು). ಅವರು (ಆತನನ್ನು ಆರಾಧಿಸಿ) ಬಹು ಸಂತೋಷದಿಂದ ಯೆರೂಸಲೇಮಿಗೆ ಹಿಂತಿರುಗಿದರು (ಲೂಕ 24:50-52).
>
> ಈ ಮಾತುಗಳನ್ನು ಹೇಳಿದ ಬಳಿಕ ಅವರು ನೋಡುತ್ತಾ ಇದ್ದಹಾಗೆ ಆತನು ಎತ್ತಲ್ಪಟ್ಟನು. ಮೋಡವು ಆತನನ್ನು ಕವಿದುಕೊಂಡಿದ್ದರಿಂದ ಅವರ ಕಣ್ಣಿಗೆ ಮರೆಯಾದನು. ಆತನು ಹೋಗುತ್ತಿರುವಾಗ ಅವರು ಆಕಾಶದ ಕಡೆಗೆ ದೃಷ್ಟಿಸಿ ನೋಡುತ್ತಾ ಇರಲಾಗಿ ಶುಭ್ರವಸ್ತ್ರಧಾರಿಗಳಾದ ಇಬ್ಬರು ಪುರುಷರು ಪಕ್ಕನೇ ಅವರ

ಹತ್ತಿರ ನಿಂತುಕೊಂಡು-ಗಲಿಲಾಯದವರೇ, ನೀವು ಯಾಕೆ ಆಕಾಶದ ಕಡೆಗೆ ನೋಡುತ್ತಾ ನಿಂತಿದ್ದೀರಿ? ನಿಮ್ಮ ಬಳಿಯಿಂದ ಆಕಾಶದೊಳಕ್ಕೆ ಸೇರಿ ಸಲ್ಪಟ್ಟಿರುವ ಈ ಯೇಸು ಯಾವ ರೀತಿ ಆಕಾಶದೊಳಕ್ಕೆ ಹೋಗಿರುವದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ ಬರುವನು ಎಂದು ಹೇಳಿದರು.

ಆಗ ಅವರು ಎಣ್ಣೆಮರಗಳ ತೋಪು ಎನಿಸಿಕೊಳ್ಳುವ ಗುಡ್ಡದಿಂದ ಯೆರೊಸಲೇಮಿಗೆ ಹಿಂತಿರುಗಿ ಬಂದರು (ಅಪೊಸ್ತಲರ ಕೃತ್ಯಗಳು 1:9-12).

ಯೇಸು ಸ್ವಾಮಿಯು ಅವರ ಕೂಡ ಮಾತನಾಡಿದ ಮೇಲೆ ಆಕಾಶಕ್ಕೆ ಒಯ್ಯಲ್ಪಟ್ಟು ದೇವರ ಬಲಗಡೆಯಲ್ಲಿ ಆಸನಾರೂಢನಾದನು (ಮಾರ್ಕ 16:19).

ಇದಕ್ಕೆ ಇನ್ನೂ ಅನೇಕ ಅಂಶಗಳು ಸೇರಿಸಿದಾಗ ಅಲ್ಲಿ ಅನೇಕ ಆಧಾರ ವಾಕ್ಯಗಳಿವೆ - ಪರೋಕ್ಷವಾಗಿ ಅಪರೋಕ್ಷವಾಗಿ - ಈ ಘಟನೆಯ ಬಗ್ಗೆ ಆಧಾರ ವಾಕ್ಯಗಳು ಹೊಸ ಒಡಂಬಡಿಕೆಯಲ್ಲಿ ಇವೆ. ಇಲ್ಲಿ ಕೆಲವು ಮಾದರಿಗಳಿವೆ:

- ಮೊದಲನೆ ಸುವಾರ್ತಾ ಪ್ರಸಂಗದಲ್ಲಿ, ಪೇತ್ರನು ಹೀಗೆ ಹೇಳಿದ್ದಾನೆ "ಯೇಸು ದೇವರ ಬಲಗೈಯಿಂದ ಉನ್ನತಸ್ಥಾನಕ್ಕೆ ಏರಿಸಲ್ಪಟ್ಟನು" (ಅಪೊಸ್ತಲರ ಕೃತ್ಯಗಳು 2:33).
- ಆತನ ಎರಡನೆಯ ಸುವಾರ್ತೆ ಪ್ರಸಂಗದಲ್ಲಿ, ಕ್ರಿಸ್ತನ ಕುರಿತು ಪೇತ್ರನು ಹೀಗೆ ಹೇಳಿದ್ದಾನೆ, "ಸಮಸ್ತವನ್ನು ಸರಿಮಾಡುವ ಕಾಲವು ಬರುವ ತನಕ ಪರಲೋಕವೆ ಕ್ರಿಸ್ತನ ಸ್ಥಾನವಾಗಿರಬೇಕು"[3] (ಅಪೊಸ್ತಲರ ಕೃತ್ಯಗಳು 3:21).
- ಪಿಸಿದ್ಯದ ಅಂತಿಯೋಕ್ಯದಲ್ಲಿರುವ ಸಭಾಮಂದಿರದಲ್ಲಿ ಪೌಲನು ತನ್ನ ಪ್ರಸಂಗದಲ್ಲಿ ಹೀಗೆ ಹೇಳಿದ್ದಾನೆ "ದೇವರು [ಯೇಸುವನ್ನು] ಸತ್ತವರೊಳಗಿಂದ ಎಬ್ಬಿಸಿದ್ದರಿಂದ ಆತನು ಇನ್ನೆಂದಿಗೂ ಕೊಳೆಯುವ ಅವಸ್ಥೆಗೆ ಸೇರತಕ್ಕವನಲ್ಲ" (ಅಪೊಸ್ತಲರ ಕೃತ್ಯಗಳು 13:34).
- ಪೌಲನು ಎಫೆಸ ಪತ್ರಿಕೆಯಲ್ಲಿ ಆರೋಹಣದ ಕುರಿತಾಗಿ ಹೆಚ್ಚಾದ ವಿಷಯಗಳನ್ನು ಸೇರಿಸಿದ್ದಾನೆ: "ಆದುದರಿಂದ 'ಆತನು ಉನ್ನತ ಸ್ಥಾನಕ್ಕೆ ಏರಿದಾಗ, ತಾನು ಜಯಿಸಿದ್ದ ಬಹುಜನರನ್ನು ಸೆರೆಹಿಂಡುಕೊಂಡು[4] ಹೋಗಿ ಮನುಷ್ಯರಿಗೆ ದಾನಗಳನ್ನು[5] ಮಾಡಿದನು ಎಂಬುದಾಗಿ ಪ್ರವಾದಿಯು ಹೇಳುತ್ತಾನೆ. ('ಏರಿ ಹೋದನೆಂದು' ಹೇಳಿದ್ದರಲ್ಲಿ ಭೂಮಿಯ ಅಧೋ ಭಾಗಕ್ಕೆ ಇಳಿದಿದ್ದನೆಂತಲೂ ಹೇಳಿದ ಹಾಗಾಯಿತಲ್ಲಾ?[6] ಇಳಿದು ಬಂದವನು ಮೇಲಣ ಎಲ್ಲಾ ಲೋಕಗಳಿಗಿಂತ ಉನ್ನತವಾಗಿ ಏರಿಹೋದವನೇ. ಆದುದರಿಂದ ಸಮಸ್ತ ಲೋಕಗಳನ್ನು ತುಂಬಿದವನಾದನು)" (ಎಫೆಸ 4:8-10).
- ಪ್ರಕಟಣೆ 12ರಲ್ಲಿ, ಒಬ್ಬ ಸ್ತ್ರೀ ಮತ್ತು ಕೆಂಪು ಮಹಾ ಘಟಸರ್ಪ ದರ್ಶನ ನೋಡುತ್ತೇವೆ. 5ನೇ ವಚನದಲ್ಲಿ ಯೇಸುವಿನ ಜನನ ಮತ್ತು ಆತನ ಆರೋಹಣದ ಕುರಿತು ಹೇಳುತ್ತದೆ; "ಆಕೆ ಜನಾಂಗಗಳನ್ನು ಕಬ್ಬಿಣದ ಕೋಲುಗಳಿಂದ[7] ಆಳಬೇಕಾದ ಒಂದು ಗಂಡು ಮಗುವನ್ನು ಹೆತ್ತಳು ಆ ಕೂಸು ಪಕ್ಕನೆ ದೇವರ ಬಳಿಗೂ ಆತನ ಸಿಂಹಾಸನದ ಬಳಿಗೂ ಎತ್ತಲ್ಪಟ್ಟಿತ್ತು."

ಆರೋಹಣವು ಎರಡು ಮಹಾಉದ್ದೇಶಗಳನ್ನು ನೆರವೇರಿಸಿವೆ: ಇದು ಭೂತಕಾಲವನ್ನು ಮುಕ್ತಾಯ ಮತ್ತು ಭವಿಷ್ಯದ ಕಾಲಕ್ಕಾಗಿ ಸಿದ್ಧತೆಯಾಗಿದೆ. ಇದನ್ನು ಇನ್ನೊಂದು ರೀತಿಯಲ್ಲಿ ನೋಡುವಾಗ ಆರೋಹಣವು ಯೇಸುವಿನ ಭೂಲೋಕ ಸೇವೆಯ ಮುಕ್ತಾಯ ಮತ್ತು ಶಿಷ್ಯರ

ಸೇವೆಯ ಮಾರ್ಗವನ್ನು ಸಿದ್ಧ ಮಾಡುವದು ಆಗಿದೆ, ಆರೋಹಣ ಆಗದೆ ಇದ್ದರೆ ಯೇಸುವಿನ ಪುನರುತ್ಥಾನಕ್ಕೂ ಮತ್ತು ಐವತ್ತು ದಿನಗಳ ನಂತರ[8] ಪೆಂತಗೋಸ್ತ ದಿನದಲ್ಲಿ ಬಂದಿರುವ ಆತ್ಮಕ್ಕೂ ಸಂಬಂದವೂ ತಪ್ಪಿಹೋಗುತ್ತಿತ್ತು. ಆರೋಹಣದ ಕಾರ್ಯವು ಯೇಸುವಿನ ಭೂಲೋಕದ ಸೇವೆ ಮತ್ತು ನಂತರ ಅಪೊಸ್ತಲರ ಸೇವೆಯ ಮಧ್ಯ ಖಂಡಿತವಾದ ವಿಭಾಗಗಳನ್ನು ಮಾಡುವ ವಿಷಯವಾಗಿದೆ.

## ಕ್ರಿಸ್ತನು ಮಹಿಮೆಪಡಿಸಲ್ಪಟ್ಟನು

ಯೇಸು ಮಹಿಮೆಯಲ್ಲಿ ಸ್ವೀಕರಿಸಲ್ಪಟ್ಟನು ಎಂದು ಆರೋಹಣವು ಮುಕ್ತಾಯ ಮಾಡುತ್ತದೆ. "ಕ್ರಿಸ್ತನು ... ತನ್ನ ಮಹಾಪದವಿಗೆ, ಸೇರುವದು ಅಗತ್ಯವಾಗಿದೆ" (ಲೂಕ 24:26) ಎಂದು ಯೇಸು ಹೇಳಿದ್ದಾನೆ. "ಯೇಸು ಪ್ರಭಾವ ಸ್ಥಾನದಲ್ಲಿ ಸೇರಿಸಲ್ಪಟ್ಟನು" (1 ತಿಮೊಥಿ 3:16) ಪೌಲನು ಬರೆದಿದ್ದಾನೆ. "ದೇವರು ... ಆತನಿಗೆ ಪ್ರಭಾವವನ್ನು ಕೊಟ್ಟನು" (1 ಪೇತ್ರನು 1:21) ಎಂದು ಪೇತ್ರನು ಹೇಳಿದ್ದಾನೆ.

ಪ್ರಥಮಬಾರಿಯಾಗಿ ಇದು ಆಶ್ಚರ್ಯವನ್ನು ಪ್ರತಿಧ್ವನಿಸುತ್ತದೆ, ಆರೋಹಣವು ಕ್ರಿಸ್ತನು ಮಾಡಿದ ಮಹಾಕಾರ್ಯವಾಗಿದೆ. ಇದರ ಕುರಿತು ಒಂದು ಕ್ಷಣ ಯೋಚಿಸು. ಯಾವುದು ಹೆಚ್ಚಾಗಿ ಎದೆ ಝಲ್ಲೆನಿಸುತ್ತದೆ: ಕೆಲವು ಶರತ್ತುಗಳನ್ನು ಕೈಗೊಳ್ಳುವದೋ ಅಥವಾ ಶರತ್ತುಗಳನ್ನು ಕೈಗೊಂಡು ನೆರವೇರಿಸುವದೋ?[9] ಈ ವಿಷಯಕ್ಕೆ, ರಕ್ಷಕನು ತನಗೋಸ್ಕರ ತನ್ನ ಕಾರ್ಯಕ್ಕಾಗಿ ಮಹಾಯಾಜಕನಾಗಿ ಮತ್ತು ರಾಜನಾಗಿ ಸಿದ್ಧಪಡಿಸಿಕೊಳ್ಳುತ್ತಿದ್ದಾನೆ. ಆರೋಹಣವು ಆ ಸಿದ್ಧತೆಗೆ ಕಿರೀಟವಾಗಿದೆ. ಫಿಲಿಪ್ಪಯಾಸ್ಸ್ ಹೀಗೆ ಬರೆಯುತ್ತಾರೆ,

> ಒಂದು ವೇಳೆ [ಪುನರುತ್ಥಾನ] ಭಾನುವಾರವಾಗಿದ್ದರೆ ಅದು ಶಿಷ್ಯರನ್ನು ತುಂಬಾ ಆಶ್ಚರ್ಯವಾಗಿರುವ ದಿನವಾಗಿರುತ್ತಿತ್ತು, ಈ ದಿನವು ಯೇಸುವಿಗೆ ಬಹಳವಾಗಿ ಆರೋಹಣದ ದಿನವಾಗಿತ್ತು. ಸೃಷ್ಟಿಕರ್ತನಾದ ಆತನು ಇಳಿದು ಬಂದು ಮತ್ತು ಎಲ್ಲವನ್ನು ಬಿಟ್ಟುಕೊಟ್ಟು ಈಗ ಮನೆಗೆ ಹಿಂತಿರುಗುತ್ತಿದ್ದಾನೆ, ಹೇಗೆಂದರೆ ಒಬ್ಬ ಸೈನಿಕನಂತೆ ಸಮುದ್ರವನ್ನು ದಾಟಿ ಬಹಳ ದಿನಗಳ ನಡೆದ ರಕ್ತಸಿಕ್ತವಾದ ಯುದ್ಧ ಮುಗಿಸಿ ಮನೆಗೆ ಹೋದಂತೆ. ಹಾಗೆಯೆ ವಾಯುಮಂಡಲದಲ್ಲಿ ಬಾಹ್ಯಕಾಶ ನೌಕೆಯನ್ನು ತರಬೇತಿ ಪಡೆದು ಎಲ್ಲಾ ಕಡೆ ಓಡಾಡಿ[10] ಕೊನೆಗೆ ಅದು ತನ್ನ ಮನೆಗೆ ಸೇರುತ್ತದೆ.[11]

### ಮಹಿಮೆ ಹೊಂದಿದ್ದು

ಯೇಸು ಪರಲೋಕಕಕ್ಕೆ ಹಿಂತಿರುಗಿದಾಗ ಏನಾಗಿರಬಹುದು ಎಂದು ಕಲ್ಪನೆ ನಿಮ್ಮ ಮನಸ್ಸಿನಲ್ಲಿ ಮಾಡಿಕೊಳ್ಳಲು ಪ್ರಯತ್ನಿಸಿ. ನಿಮ್ಮ ಮನಸ್ಸಿನಲ್ಲಿ, ಪರಲೋಕದಲ್ಲಿ ಸಂತೋಷದ ಕೂಗಾಟ ಪ್ರತಿದ್ವನಿಸಿದ್ದು ಕೇಳಿದ್ದಿರೋ?

ಕೀರ್ತನೆ 24 ಮಹಾರಾಜನು ಮನೆಗೆ ಹಿಂತಿರುಗುವಾಗ ಹಾಡಿದ ಜಯಗೀತವಾಗಿದೆ. ಆ ಶಬ್ದಗಳು ದೇವರು ಪರಲೋಕಕ್ಕೆ ಹಿಂತಿರುಗುವ ಸಂದರ್ಭ ಸೂಚಿಸುತ್ತದೆ ಎಂದು ಕೆಲವೊಬ್ಬರು ಸಲಹೆಕೊಡುತ್ತಾರೆ. ಆ ವಾಕ್ಯಭಾಗವನ್ನು ಉಪಯೋಗಿಸಿ, ಯೇಸು ಆರೋಹಣ ಯಾವ ರೀತಿಯಲ್ಲಿ ಇರಬಹುದೆಂದು ಅವರು ದೃಷ್ಟಿಸುತ್ತಿದ್ದರು.

ಆತನು ಆರೋಹಣವಾದಂತೆಯೆ, ದೂತರು ಸಂದರ್ಶಿಸಿದರು ಮತ್ತು ಆತನಿಗೆ ಬೆಂಗಾವಲಾಗಿದ್ದರು. ಪರಲೋಕ ಮುಟ್ಟುತ್ತಲೆ ಅವರು ಕೂಗಿದರು: "ದ್ವಾರಗಳೆ ಉನ್ನತವಾಗಿರ್ರಿ ಪುರಾತನದ ಕದಗಳೇ, ತೆರೆದುಕೊಂಡಿರ್ರಿ, ಮಹಾಪ್ರಭಾವವುಳ್ಳ ಅರಸನು ಆಗಮಿಸುತ್ತಾನೆ!" (ವಚನ 7). ಆ ಪಟ್ಟಣದಲ್ಲಿರುವವರು ಪ್ರತಿಕ್ರಿಯಿಸಿದರು, "ಮಹಾಪ್ರಭಾವವುಳ್ಳ ಅರಸನು ಯಾರು?" (ವಚನ 8ಎ). ದೂತರು ಯೇಸುವಿನೊಂದಿಗೆ ಕೂಗಿದರು, "ಮಹಾಬಲಿಷ್ಟನೂ, ವಿಶೇಷ ಪರಾಕ್ರಮಿಯ ಆಗಿರುವ ಯೆಹೋವ" (ವಚನ 8ಬಿ). ಅವರು ಪುನಃ ಕೂಗಿದರು,

“ದ್ವಾರಗಳೇ ಉನ್ನತವಾಗಿರಿ ಪುರಾತನವಾದ ಕದಗಳೆ ತೆರೆದುಕೊಂಡಿರಿ ಮಹಾಪ್ರಭಾವವುಳ್ಳ ಅರಸನು ಆಗಮಿಸುತ್ತಾನೆ!” (ವಚನ 9). ಮತ್ತೊಂದು ಸಾರಿ ಆ ಪಟ್ಟಣದಲ್ಲಿರುವವರು ಕೇಳಿದರು, “ಮಹಾಪ್ರಭಾವವುಳ್ಳ ಈ ಅರಸನು ಯಾರು?” (ವಚನ 10ಎ). ಯೇಸುವಿನೊಂದಿಗೆ ಇದ್ದವರು ಈ ಸಾರಿ ಈ ಗೀತೆಯನ್ನು ಹಾಡಿದರು: “ಸೇನಾಧೀಶ್ವರನಾದ ಯೆಹೋವನೆ ಮಹಾಪ್ರಭಾವವುಳ್ಳ ಅರಸನು ಈತನೇ” (ವಚನ 10ಬಿ). ಯೇಸುವಿನೊಂದಿಗೆ ಇದ್ದವರು ಈ ಸಾರಿ ಈ ಗೀತೆಯನ್ನು ಹಾಡಿದರು: “ಸೇನಾಧೀಶ್ವರನಾದ ಯೆಹೋವನೆ ಮಹಾಪ್ರಭಾವವುಳ್ಳ ಅರಸನು ಈತನೇ” (ವಚನ 10ಬಿ).

ಯೇಸು ಪರಲೋಕದ ದ್ವಾರದಲ್ಲಿ ಪ್ರವೇಶಿಸಿದಾಗ “ಲೋಕ ಉಂಟಾಗುವದಕ್ಕಿಂತ ಮುಂಚೆ” (ಯೋಹಾನ 17:5) ತಂದೆಯೊಂದಿಗೆ ಹಂಚಿಕೊಂಡ ತನ್ನ ಮಹಿಮೆಯನ್ನು ಹಿಂದಕ್ಕೆ ಪಡೆದನು.

> ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು[12] ಆತನಿಗೆ ದಯಪಾಲಿಸಿದ್ದಾನೆ. ಆದುದರಿಂದ ಸ್ವರ್ಗ ಮರ್ತ್ಯಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸು ಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು (ಫಿಲಿಪ್ಪಿ 2:9-11).

ನಿಷ್ಕಳಂಕ ಯಜ್ಞದ ಕುರಿ ಮನುಷ್ಯರ ಪಾಪಗಳಿಗಾಗಿ ವಧಿಸಲ್ಪಟ್ಟದ್ದರಿಂದ ಪರಲೋಕದಲ್ಲಿರುವ ಎಲ್ಲಾ ಸೇನಾಧೀಶರು ಆತನಿಗೆ ಸ್ತೋತ್ರ ಮಾಡಲು ಪ್ರಾರಂಭಿಸಿದರು (ನೋಡಿರಿ 1 ಪೇತ್ರ 1:18, 19). ಯೋಹಾನ ಹೀಗೆ ಬರೆಯುತ್ತಾನೆ,

> ಇದಲ್ಲದೆ ಸಿಂಹಾಸನವು ಜೀವಿಗಳು ಹಿರಿಯರು ಇವರ ಸುತ್ತಲು ಬಹುಮಂದಿ ದೇವದೂತರನ್ನು ಕಂಡೆನು; ಅವರ ಸಂಖ್ಯೆಯು ಕೋಟ್ಯಾನು ಕೋಟಿಯಾಗಿಯೂ ಲಕ್ಷೋಪಲಕ್ಷವಾಗಿಯೂ ಇತ್ತು. ಅವರ ಸ್ವರವು ನನಗೆ ಕೇಳಿಸಿತು. ಅವರು ಮಹಾಶಬ್ದದಿಂದ - ವಧಿತನಾದ ಕುರಿಯಾದಾತನು ಬಲ ಐಶ್ವರ್ಯ ಜ್ಞಾನ ಸಾಮರ್ಥ್ಯಮಾನ ಪ್ರಭಾವ ಸ್ತೋತ್ರಗಳನ್ನು ಹೊಂದುವುದಕ್ಕೆ ಯೋಗ್ಯನು ಎಂದು ಹೇಳಿದರು (ಪ್ರಕಟಣೆ 5:11, 12).

ದೇವರು ಕ್ರಿಸ್ತನನ್ನು “ತನ್ನ ಬಲಗಡೆಯಲ್ಲಿ ಕೂಡ್ರಿಸಿಕೊಂಡನು” (ಎಫೆಸ 1:20).

**ಮಹಾ ಯಾಜಕನಾಗಿ**

ಯಾವಾಗ ಯೇಸು ಪರಲೋಕಕ್ಕೆ ಏರಿ ಹೋದನೊ, ಅಂದು ಆತನು ನಮಗೆ *ಮಹಾಯಾಜಕನಾದನು.* ಇಬ್ರಿಯರಿಗೆ ಬರೆದ ಪುಸ್ತಕದ ಗ್ರಂಥಕರ್ತನು ಹೀಗೆ ಹೇಳುತ್ತಾನೆ “ಪರಲೋಕ ಮಂಡಲಗಳನ್ನು[13] ದಾಟಿ ಹೋದ ದೇವ ಕುಮಾರನಾದ ಯೇಸುವೆಂಬ ಶ್ರೇಷ್ಠ ಮಹಾಯಾಜಕನು ನಮಗಿರುವುದರಿಂದ ನಾವು ಮಾಡಿರುವ ಪ್ರತಿಜ್ಞೆಯನ್ನು ಬಿಡದೆ ಹಿಡಿಯೋಣ” (ಇಬ್ರಿಯ 4:14).

ಹಳೇ ಒಡಂಬಡಿಕೆಯಲ್ಲಿ ವರ್ಷಕ್ಕೆ - ಒಂದು ಸಾರಿ ಪ್ರಯಶ್ಚಿತ ದಿನದಲ್ಲಿ ಮಹಾಯಾಜಕನು, ಮಹಾಪರಿಶುದ್ಧ ಸ್ಥಳದಲ್ಲಿ ಪ್ರವೇಶಿಸಿ ತನ್ನ ಪಾಪಗಳಿಗಾಗಿ ಮತ್ತು ಜನರ ಪಾಪಗಳಿಗಾಗಿ, ದೋಷ ಪರಿಹಾರ ಮಾಡಬೇಕು (ನೋಡಿರಿ ಯಾಜಕಕಾಂಡ 16:2-34). ನಮ್ಮ ಮಹಾಯಾಜಕನಾದ, ಯೇಸು ಪರಲೋಕಕ್ಕೆ ಹಿಂತಿರುಗಿದಾಗ *ನಮ್ಮ ಪಾಪಗಳಿಗಾಗಿ* ತನ್ನ ಸ್ವಂತ ರಕ್ತದೊಂದಿಗೆ ಪ್ರವೇಶಿಸಿದನು. ಇದ್ದಕ್ಕೆ ಸಂಬಂಧಿಸಿದಂತೆ, ಇಬ್ರಿಯ ಪುಸ್ತಕ ಈ ರೀತಿಯಲ್ಲಿ ಹೇಳುತ್ತದೆ,

> ಆದರೆ ಕ್ರಿಸ್ತನು ಈಗ ದೊರೆತಿರುವ ಮೇಲುಗಳನ್ನು ಕುರಿತು ಮಹಾಯಾಜಕನಾಗಿ ಬಂಧು ಕೈಯಿಂದ ಕಟ್ಟಲ್ಪಡದಂಥ ಅಂದರೆ ಈ ಸೃಷ್ಠಿಗೆ ಸಂಬಂಧ ಪಡದಂಥ ಘನ ವಾಗಿಯೂ ಉತ್ಕೃಷ್ಟವಾಗಿಯೂ ಇರುವ ಗುಡಾರದಲ್ಲಿ ಸೇವೆಯನ್ನು ಮಾಡವವನಾಗಿ ಹೋತಗಳ ಮತ್ತು ಹೋರಿಕರಗಳ ರಕ್ತವನ್ನು ತೆಗೆದು ಕೊಳ್ಳದೆ ಸ್ವಂತ ರಕ್ತವನ್ನೇ ತೆಗೆದುಕೊಂಡು ನಮಗೋಸ್ಕರ ನೀತ್ಯ ವಿಮೋಚನೆಯನ್ನು ಸಂಪಾದಿಸಿಕೊಂಡವನಾಗಿ ಒಂದೇ ಸಾರಿ ದೇವರ ಸನ್ನಿಧಾನಕ್ಕೆ ಪ್ರವೇಶಿಸಿದನು (ಇಬ್ರಿಯ 9:11, 12).
>
> ಯಾಕೆಂದರೆ ಕ್ರಿಸ್ತನು ನಿಜವಾದ ದೇವಾಲಯಕ್ಕೆ ಅನುರೂಪ ಮಾತ್ರವಾದದ್ದಾಗಿಯೂ ಕೈಯಿಂದ ಕಟ್ಟದ್ದಾಗಿಯೂ ಇರುವ ಆಲಯದಲ್ಲಿ ಪ್ರವೇಶಿಸಿದೆ ದೇವರ ಸಮ್ಮುಖದಲ್ಲಿ ನಮಗೋಸ್ಕರ ಈಗ ಕಾಣಿಸಿಕೊಳ್ಳುವುದಕ್ಕೆ ಪರಲೋಕದಲ್ಲಿಯೇ ಪ್ರವೇಶಿಸಿದನು (9:24).
>
> ಆದರೆ ಈ ಯಾಜಕನು ಪಾಪನಿವಾರಣೆಗೋಸ್ಕರ ನಿರಂತರವಾಗಿ ನಿಲ್ಲುವ ಒಂದೇ ಯಜ್ಞವನ್ನು ಸಮರ್ಪಿಸಿ ದೇವರ ಬಲಗಡೆಯಲ್ಲಿ ಕೂತುಕೂಂಡನು (10:12).

ಮಹಾಯಾಜಕನಾಗಿ ಯೇಸುವಿನ ಇನ್ನೊಂದು ಮಹತ್ವದ ಕಾರ್ಯವೆಂದೆರೆ ಆತನು ನಮ್ಮ ಮಧ್ಯಸ್ತಗಾರನಾಗಿದ್ದಾನೆ. ಪೌಲನು ಹೀಗೆ ಹೇಳುತ್ತಾನೆ, "ದೇವರು ಒಬ್ಬನೆ; ದೇವರಿಗೂ ಮನುಷ್ಯರಿಗೂ ಮಧ್ಯಸ್ತನು ಒಬ್ಬನೆ, ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೆ" (1 ತಿಮೊಥೆ 2:5). ಈ ಸಿದ್ಧತೆಯ ಒಂದು ಆಶ್ಚರ್ಯವಾದ ವಿಷಯವೇನೆಂದರೆ ಯೇಸು *ದಯೆಯುಳ್ಳ* ಪಾತ್ರವನ್ನು ವಹಿಸಿದ್ದನು:

> ಯಾಕೆಂದರೆ ನಮಗಿರುವ ಮಹಾಯಾಜಕನು ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಅನುತಾಪವಿಲ್ಲದವನಲ್ಲ; ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು ... ಪಾಪ ಮಾತ್ರ ಮಾಡಲಿಲ್ಲ. ಆದುದರಿಂದ ನಾವು ಕರುಣೆಯನ್ನು ಹೊಂದುವೆಂತೇಯೂ ಆತನ ದಯೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವೆಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರೋಣ (ಇಬ್ರಿಯ 4:15, 16).

ಯೇಸುವು *ಶರೀರದಲ್ಲಿ* ಪರಲೋಕಕ್ಕೆರುವುದಕ್ಕೆ ಇದು ಮುಖ್ಯವಾದ ಕಾರಣವಾಗಿರಬಹುದು. *ಮನುಷ್ಯ*ನಾಗಿರುವದು ಯೇಸುವಿನ ಇನ್ನೊಂದು ಸರ್ವದಾ ಭಾಗವಾಗಿದೆ. 1 ತಿಮೋಥಿ 2:5ರಲ್ಲಿರುವ "ಮನುಷ್ಯನು" ಎಂಬ ಪದವನ್ನು ಗಮನಿಸಿರಿ: "... ದೇವರಿಗೂ ಮನುಷ್ಯನಿಗೂ ಮದ್ಯಸ್ತನು ಒಬ್ಬನೇ; ಆತನು *ಮನುಷ್ಯನಾಗಿರುವ* ಕ್ರಿಸ್ತ ಯೇಸುವೇ" (ಒತ್ತಿ ಹೇಳಿದ್ದು ನನ್ನದು.) ಪೌಲನು "ಮಾರ ಬೆಟ್ಟದ ಮೇಲಿನ ಬೋಧನೆಯಲ್ಲಿ" ಅದೇ ವಿಧವಾದ ಪದಪ್ರಯೋಗಗಳನ್ನು ಬಳಸಿದ್ದಾನೆ: ದೇವರು "ನಿಷ್ಕರ್ಷೆಮಾಡಿದ *ಪುರುಷನ* ಕೈಯಿಂದ ನೀತಿಗನುಸಾರವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವುದಕ್ಕೆ ಒಂದು ದಿವಸವನ್ನು ಗೊತ್ತು ಮಾಡಿದ್ದಾನೆ ಅವನನ್ನು ಸತ್ತವರೊಳಗಿಂದ ಎಬ್ಬಿಸಿದ್ದರಲ್ಲಿ ಇದನ್ನು ನಂಬುವುದಕ್ಕೆ ಎಲ್ಲರಿಗೂ ಆಧಾರ ಕೊಟ್ಟಿದ್ದಾನೆ ಅಂದನು" (ಅಪೊಸ್ತಲರ ಕೃತ್ಯಗಳು 17:31; ಒತ್ತಿ ಹೇಳಿದ್ದು ನನ್ನದು). ಪ್ರಕಟಣೆ 4 ಮತ್ತು 5ರ ಸಿಂಹಾಸನದ ದೃಶ್ಯದಲ್ಲಿ, ಕುರಿಮರಿಯಾದ (ಯೇಸು) "ಕೊಯ್ದಿರುವ ಕುರಿ"ಯಂತೆ (ಪ್ರಕಟಣೆ 5:6) ಸಿಂಹಾಸನದ ಮುಂದೆ ನಿಂತುಕೊಂಡಿದ್ದಾನೆ - ಕೆಲವು ಬರಹಗಾರರು ಆತನು ಪರಲೋಕಕ್ಕೆ ಹೋದರು ಕೂಡ ಶಿಲುಬೆ ಶ್ರಮೆ ಮರಣದ ಕಲೆಗಳು ಹಾಗೆಯೆ ಇದ್ದವು ಎನ್ನುವ ಸಾಧ್ಯತೆಗಳಿವೆ ಎಂದು ಹೇಳುವರು.

ಯೇಸು ಪರಲೋಕಕ್ಕೆರಿದ ನಂತರ, ತನ್ನ ದೇಹ ಎಷ್ಟು ಬಲಹೀನಗೊಂಡಿದೆ ಅಥವಾ ಹೇಗೆ ನಾನು ಮತ್ತು ನೀನು ಈ ಶರೀರದಲ್ಲಿ ಹೋರಾಟ ಮಾಡಿದ್ದೇವೆ ಎನ್ನುವ ಸಂಗತಿಗಳನ್ನು

ಮರೆತಿಲ್ಲ. ಆತನು ಮಹಾಯಾಜಕನಾಗಿ ಆತನು ಅರ್ಥಮಾಡಿಕೊಳ್ಳುತ್ತಾನೆ ಮತ್ತು ಜ್ಞಾಪಕ ಮಾಡಿಕೊಳ್ಳುತ್ತಾನೆ![14]

**ರಾಜನಾಗಿ**

ಯೇಸು ನಿಜವಾಗಿ ನಮ್ಮ ಪ್ರಧಾನ ಯಾಜಕನಾದನು; ಆದರೆ "ಮಹಿಮೆ ಹೊಂದಿದನು" ಎಂಬ ಶಬ್ದವನ್ನು ಕೇಳಿದಾಗ ಆತನು ರಾಜನಾಗಿ ಆಸನಾರೂಢನಾದನೆಂಬುದು ಕೂಡ ನಿಜವಾದದ್ದೆಂದು ಆಲೋಚಿಸುತ್ತೇವೆ. ಈಗಾಗಲೆ ಗಮನಿಸಿದಂತೆ, "ಯೇಸು ... ಆಕಾಶಕ್ಕೆ ಒಯ್ಯಲ್ಪಟ್ಟು ದೇವರು ಬಲಗಡೆಯಲ್ಲಿ ಆಸನಾರೂಢನಾದನು" (ಮಾರ್ಕ 16:19). ಕ್ರಿಸ್ತನು ದೇವರ ಬಲಗಡೆಯಲ್ಲಿದ್ದಾರೆ ಎಂಬುದಾಗಿ ಪುನಃ ಪುನಃ ವಾಕ್ಯವು ದೃಢಪಡಿಸುತ್ತದೆ. ಸ್ತೇಫನನು ಮರಣ ಹೊಂದುವಾಗ, "ಅವನು ಪವಿತ್ರಾತ್ಮ ಭರಿತನಾಗಿ ಆಕಾಶದ ಕಡೆಗೆ ದೃಷ್ಟಿಸಿ ನೋಡಿ ದೇವರ ಪ್ರಭಾವವನ್ನು ದೇವರ ಬಲಗಡೆಯಲ್ಲಿ ನಿಂತಿದ್ದ ಯೇಸುವನ್ನು ಕಂಡು - ಅಗೋ ಆಕಾಶವು ತೆರೆದಿರುವದನ್ನು ಮನುಷ್ಯಕುಮಾರನು ದೇವರ ಬಲಗಡೆಯಲ್ಲಿ ನಿಂತಿರುವದನ್ನು ನೋಡುತ್ತೇನೆಂದು ಹೇಳಿದನು." (ಅಪೊಸ್ತಲರ ಕೃತ್ಯಗಳು 7:55, 56).[15] "ಮೇಲಿರುವವುಗಳನ್ನು ಹುಡಕಿರಿ ಅಲ್ಲಿ ಕ್ರಿಸ್ತನು ದೇವರ ಬಲಗಡೆಯಲ್ಲಿ ಆಸನರೊಢನಾಗಿದ್ದಾನೆ" (ಕೊಲಸ್ಸೆ 3:1) ಎಂದು ಪೌಲನು ಎಲ್ಲಾ ಕ್ರೈಸ್ತರನ್ನು ಪ್ರೇರೇಪಿಸುತ್ತಾನೆ. "ಆತನು ಪರಲೋಕಕಕ್ಕೆ ಹೋಗಿ ದೇವರ ಬಲಗಡೆಯಲ್ಲಿದ್ದಾನೆ; ದೇವದೂತರೂ ಅಧಿಕಾರಿಗಳೂ ಮಹತ್ವಗಳೂ ಆತನ ಸ್ವಾಧೀನವಾಗಿವೆ" (1 ಪೇತ್ರನು 3:21, 22) ಪೇತ್ರನು ಬರೆದಿದ್ದಾನೆ.

ಯೇಸು ದೇವರ ಬಲಗಡೆಯಲ್ಲಿ ಕುಳಿತುಕೊಂಡಿದ್ದಾನೆ ಎಂಬುದಕ್ಕೆ ರುಜುವಾತಾಗಿ ಪೇತ್ರನು ಪೆಂತಕೋಸ್ತ ದಿನದಂದು ನೆಡೆದಿರುವ ಅದ್ಭುತವಾದ ದೃಶ್ಯಗಳನ್ನು ಮತ್ತು ಶಬ್ದಗಳನ್ನು ಬಳಸಿ ಯೇಸು ಕರ್ತನಂತೆ ಕಿರೀಟವನ್ನು ಹೊಂದಿದವನಾಗಿದ್ದಾನೆ ಎಂದು ಹೇಳಿದನು:

> ಆತನು ದೇವರ ಬಲಗೈಯಿಂದ ಉನ್ನತಸ್ಥಾನಕ್ಕೆ ಏರಿಸಲ್ಪಟ್ಟು ವಾಗ್ದನವಾಗಿದ್ದ ಪವಿತ್ರಾತ್ಮವರವನ್ನು ತಂದೆಯಿಂದ ಹೊಂದಿ ನೀವು ನೋಡಿ ಕೇಳುವದನ್ನು ಸುರಿಸಿದ್ದಾನೆ.[16] ದಾವೀದನು ಆಕಾಶಕ್ಕೆ ಏರಿಹೋಗಲಿಲ್ಲ. ತಾನೇ ಹೇಳುವ ಮಾತೇನೆಂದರೆ. ನಾನು ನಿನ್ನ ವಿರೋಧಿಗಳನ್ನು ನಿನ್ನ ಪಾದಗಳಿಗೆ ಪೀಠವಾಗ ಮಾಡುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ಕರ್ತನು ನನ್ನ ಒಡೆಯನಿಗೆ ನುಡಿದನು ಎಂಬುದೇ. ಆದದರಿಂದ ನೀವು ಶಿಲುಬೆಗೆ ಹಾಕಿಸಿದ ಈ ಯೇಸುವನ್ನೇ ದೇವರು ಒಡೆಯನನ್ನಾಗಿಯೂ ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂಬುದು ಇಸ್ರಾಯೇಲ್ ಕುಲದೇವರಿಗೆಲ್ಲಾ ನಿಸ್ಸಂದೇಹವಾಗಿ ತಿಳಿದಿರಲಿ ಎಂದು ಹೇಳಿದನು (ಅಪೊಸ್ತಲರ ಕೃತ್ಯಗಳು 2:33-36).

ದೇವರು ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಪೌಲನು ಹೀಗೆ ಬರೆದಿದ್ದಾನೆ ...

> ... ಆತನ ಬಲಾತಿಶಯವು ಎಷ್ಟು ಮಹತ್ತಾದದ್ದೆಂಬುದು ಕ್ರಿಸ್ತನಲ್ಲಿ ತೋರಿಬಂದಿದೆ. ಹೇಗಂದರೆ ಆತನು ಸತ್ತಿದ್ದ ಕ್ರಿಸ್ತನನ್ನು ಬದುಕಿಸಿ ಪರಲೋಕದೊಳಗೆ ಸಕಲರಾಜ್ಯತ್ವ ಅಧಿಕಾರ ಮಹತ್ವ ಪ್ರಭುತ್ವಾದಿಗಳ ಮೇಲೆಯೂ ಈಲೋಕದಲ್ಲಿ ಮಾತ್ರವಲ್ಲದೆ ಬರುವ ಲೋಕದಲ್ಲಿ ಸಹ ಹೆಸರುಗೊಂಡವರೆಲ್ಲರ ಮೇಲೆಯೂ ತನ್ನ ಬಲಗಡೆಯಲ್ಲಿ ಕೂಡ್ರಿಸಿಕೊಂಡನು. ಆತನು ಸಮಸ್ತವನ್ನೂ ಕ್ರಿಸ್ತನ ಪಾದಗಳ ಕೆಳಗೆ ಹಾಕಿದನು, ಇದಲ್ಲದೆ ಆತನನ್ನು *ಎಲ್ಲಾದರ ಮೇಲಿ* ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು (ಎಫಸೆ 1:20-22; ಒತ್ತಿ ಹೇಳಿದ್ದ ನನ್ನದು).

ಕ್ರಿಸ್ತನು ಕಿರೀಟವನ್ನು ಹೊಂದಿ ತಂದೆಯಾದ ದೇವರೊಂದಿಗೆ ಸಹ - ಆಡಳಿತಗಾರನಾಗಿ ಸಿಂಹಾಸನದ ಮೇಲೆ ಕೂತಿರುವದು ಇದು ಆಶ್ಚರ್ಯಕರವಾದ ಸಂದರ್ಭವಾಗಿದೆ. ಅನೇಕರು ದಾನಿಯೇಲ ಪುಸ್ತಕದ 7ನೇ ಅಧ್ಯಾಯದಲ್ಲಿ ಪ್ರವಾದಿ ಕಾಣುವ ರಾತ್ರಿಯ ದರ್ಶನವು ಯೇಸುವಿನ ಪಟ್ಟಾಭೀಷೇಕದ ಕುರಿತು ಯೋಚಿಸುತ್ತಾರೆ:

> ನಾನು ಕಂಡ ರಾತ್ರಿಯೆ ಕನಸಿನಲ್ಲಿ ಇಗೋ, ಮನುಷ್ಯಕುಮಾರ ನಂತಿರುವವನು ಆಕಾಶದ ಮೇಘಗಳೊಂದಿಗೆ ಬಂದು ಆ ಮಹಾವೃದ್ಧನನ್ನು ಸಮಿಪಿಸಿದನು. ಅವನನ್ನು ಆತನ ಸನ್ನಿಧಿಗೆ ತಂದರು. ಸಕಲ ಜನಾಂಗ ಕುಲಭಾಷೆಗಳವರು ಅವನನ್ನು ಸೇವಿಸಲೆಂದು ಅವನಿಗೆ ದೊರೆ ತನವೂ ಘನತೆಯೂ ರಾಜ್ಯವು ಕೊಡೋಣವಾದವು; ಅವನ ಆಳ್ವಿಕೆಯು ಅಂತ್ಯವಿಲ್ಲದ್ದು, ಶಾಶ್ವತವಾದದ್ದು; ಅವನ ರಾಜ್ಯವು ಎಂದಿಗೂ ಅಳಿಯದು (ದಾನಿಯೇಲ 7:13, 14).[17]

ಆರೋಹಣಕ್ಕಿಂತ ಮುಂಚೆ ಯೇಸು ಹೀಗೆ ಹೇಳಿದ್ದಾನೆ, "ಎಲ್ಲಾ ಅಧಿಕಾರ … ಪರಲೋಕ ಮತ್ತು ಭಲೋಕದಲ್ಲಿ ನನಗೆ ಕೊಡಲ್ಪಟ್ಟಿದೆ" (ಮತ್ತಾಯ 28:18). ನಿಮ್ಮೆಲ್ಲರಿಗೂ "ಕರ್ತನು ಒಬ್ಬನೇ" (ಎಫಸ 4:5) ಆತನು ಯೇಸು ಕ್ರಿಸ್ತನು.[18] ಆರೋಹಣವು ನಮಗೆ ಈ ಮಹಾ ಸತ್ಯದ ಭರವಸೆ ಕೊಡುತ್ತದೆ!

## ಶಿಷ್ಯರ ಸಿದ್ಧತೆ

ನಾನು ಮೊದಲೆ ಹೇಳಿದಂತೆ ಆರೋಹಣವು ಆತನ ಭೂಲೋಕದ ಸೇವೆಯ ವಿಷಯದಲ್ಲಿ ಮಹಾಸಂತೋಷವನ್ನುಂಟು ಮಾಡುವ ದಿನವಾಗಿತ್ತು. ಹೇಗಿದ್ದರೂ, ಆರೋಹಣವು ಆತನ ಲಾಭಕ್ಕಾಗಿ ಅಲ್ಲ; ಅದು ಶಿಷ್ಯರಿಗೆ ವಿಶೇಷವಾದ ಅರ್ಥಗರ್ಭಿತವಾದದ್ದಾಗಿತ್ತು. ಕೊನೆಯ ಮಹಾ ಬಿಳ್ಕೊಡುಗೆಯ ಚರ್ಚೆಯಲ್ಲಿ, "… ನಾನು ಹೋಗುವದು *ನಿಮಗೆ* ಹಿತಕರವಾಗಿದೆ" (ಯೋಹಾನ 16:7ಎ; ಒತ್ತಿ ಹೇಳಿದ್ದು ನನ್ನದು) ಎಂದು ಕ್ರಿಸ್ತನು ಅವರಿಗೆ ಹೇಳಿದನು.

### ಜವಾಬ್ದಾರಿಯನ್ನು ಬೇರೊಬ್ಬರಿಗೆ ಕೊಟ್ಟನು

ಯೇಸು ತನ್ನ ಅಪೊಸ್ತಲರಿಗೆ ನಾನು ಹೋಗಬೇಕಾಗಿದ್ದೇನೆ - ಮತ್ತು ಆತನ ಸ್ಥಳದಲ್ಲಿ ಅವರು ಮುಂದುವರಿಯಬೇಕಾಗಿದೆ. ಅವರಿಗೆ ಹೀಗೆ ಹೇಳಿದನು, "… ತಂದೆ ಕಳುಹಿಸಿಕೊಟ್ಟ ಹಾಗೆಯೇ ನಾನು ನಿಮ್ಮನ್ನು ಕಳುಹಿಸಿಕೊಡುತ್ತೇನೆ" (ಯೋಹಾನ 20:21). ಆತನು ಮತ್ತೇ ಅವರಿಗೆ ಹೀಗೆ ಹೇಳಿದನು, "[Y] ನೀವು *ನನ್ನ* ಸಾಕ್ಷಿಗಳಾಗಿರಿ … ಭೂಲೋಕದ ಕಟ್ಟ ಕಡೆಯವರೆಗೂ" (ಅಪೊಸ್ತಲರ ಕೃತ್ಯಗಳು 1:8; ಒತ್ತಿ ಹೇಳಿದ್ದು ನನ್ನದು).

ಒಂದು ಕ್ಷಣ, ನೀವು ಅಪೊಸ್ತಲರ ಸ್ಥಾನದಲ್ಲಿ ನಿಂತುಕೊಳ್ಳಬೇಕು ಕರ್ತನು ಅವರಿಗೆ ತಾನು ಬಿಟ್ಟು ಹೋಗುವೆನು ಎಂದು ಹೇಳಿದನು, ಆದರೆ ಅವರಿಗೆ ಯಾವಾಗ ಅಥವಾ ಎಲ್ಲಿಗೆ ಅಥವಾ ಹೇಗೆ ಎನ್ನುವದು ಅವರಿಗೆ ಗೊತ್ತಿರಲಿಲ್ಲ. ಅವರು ಆತನ ಜೊತೆಯಲ್ಲಿ ನಲವತ್ತು ದಿನಗಳ ಕಾಲ ಇದ್ದಾಗ ಬಹುಶಃ ಅವರು ಆಶ್ಚರ್ಯವಾಗಿರಬಹುದು, "ಆ ಸಮಯವೂ ಇದಾಗಿದ್ದಿಯೋ? ಆ ಸ್ಥಳವು ಇದೇ ಆಗಿದ್ದಿಯೋ?" ಅಂತಿಮವಾಗಿ, ಹಾಗಿರುವಾಗಲೂ, ಅವರು ಪರಲೋಕಕ್ಕೆ ಆರೋಹಣವಾಗುವುದನ್ನು ಉಸಿರುಗಟ್ಟಿ ನೋಡುತ್ತಾ ಇದ್ದರು. ಅದೇ ಕ್ಷಣದಲ್ಲಿ ಮೋಡದಲ್ಲಿ ಆತನು ಅದೃಶ್ಯವಾದಾಗ, ಅಲ್ಲಿ ಯಾವುದೇ ಪ್ರಶ್ನೆ ಇರಲಿಲ್ಲ. ಆತನು *ಹೋದನು,* ನಿಜವಾಗಿಯೂ ಹೋದನು.[19] ಜವಾಬ್ದಾರಿಯು ಅವರಿಗೆ ಕೊಡಲ್ಪಟ್ಟಿತು.

ಒಂದು ಸಾದೃಶ್ಯ ಹೋಲಿಕೆ ನನ್ನ ಮನಸ್ಸಿಗೆ ಬಂತು. ಅದು ಪ್ರಕೃತಿಯಿಂದ: ತಾಯಿ ಪಕ್ಷಿ ತನ್ನ ಮರಿ ಪಕ್ಷಿಗೆ ಗೂಡಿನಿಂದ ತಳ್ಳಿ ಪರಿಣಾಮಕಾರಿಯಾಗಿ, "ನಿನ್ನ ಕಾಲುಗಳ ಮೇಲೆ ನೀನು ನಿಂತುಕೊಳ್ಳಲು ಇದೆ ನಿನಗೆ ಸಮಯ!" ಎಂದು ಹೇಳಿದಂತೆಯೆ ಆರೋಹಣವು ಇದೆ.

ಇನ್ನೊಂದು ದೃಷ್ಟಾಂತ ಸಭೆಯ ಜೀವನದಿಂದ: ಒಬ್ಬ ಸಭಾಪಾಲಕರು ತನ್ನ ಸಭೆಯ ಸದಸ್ಯರಿಗೆ, "ನಾನು ನನ್ನ ಮನೆಗೆ ಹಿಂತಿರುಗಿ ಹೋಗಬೇಕಿದೆ; ಈ ಸ್ಥಳದಲ್ಲಿರುವ ಸಭೆಯ ಕೆಲಸವು ಆದು ನಿಮಗೆ ಬಿಡಲ್ಪಟ್ಟಿದೆ!" ಎಂದು ಹೇಳಿದ ಹಾಗೆ ಆರೋಹಣವು ಇರುತ್ತದೆ.


**ಆತ್ಮವು ಕೊಡಲ್ಪಟ್ಟಿದೆ**

ಅಪೊಸ್ತಲರ ಮೇಲೆ ದೊಡ್ಡ ಜವಾಬ್ದಾರಿ ಕೊಡಲ್ಪಟ್ಟಿದೆ ಎಂದು ಆರೋಹಣ ಘೋಷಿಸುವುದು ಮಾತ್ರವಲ್ಲದೆ, ಜವಾಬ್ದಾರಿಯನ್ನು ದೈವೀಕ ಸಹಾಯದಿಂದ ನೆರವೇರಿಸಲು ಅದರ ಅವಶ್ಯಕತೆ ಸಹ ಅವರಿಗೆ ಇದೆ ಎಂದು ಪ್ರಕಟಿಸುತ್ತದೆ. ನಾನು ಹೋಗುವದು ನಿಮಗೆ ಹಿತಕರವಾಗಿದೆ ಎಂದು ಅವರಿಗೆ ಹೇಳಿದ ನಂತರ, ಯೇಸು ಅವರಿಗೆ ಯಾಕೆ ಎಂಬುದನ್ನು ಹೇಳಿದರು: "ನಾನು ಹೋಗದಿದ್ದರೆ ಆ ಸಾಹಯಕನು ನಿಮ್ಮ ಬಳಿಗೆ ಬರುವದಿಲ್ಲ" (ಯೋಹಾನ 16:7ಬಿ). ಆತನು ಸೂಚಿಸಿದಂತಾ "ಸಹಾಯಕನು" ಪವಿತ್ರಾತ್ಮನಾಗಿದ್ದಾನೆ. ಆತನು ಅಧಿಪತಿಯಾಗುವತನಕ ಆತ್ಮನನ್ನು ಅವರ ಮೇಲೆ ಕಳಿಸುವುದಿಲ್ಲ, ಮತ್ತು ಆತನು ದೇವರ ಬಲಗಡೆಯಲ್ಲಿ ಕುಳಿತುಕೊಳ್ಳುವವರೆಗೆ ಆತನು ಅಧಿಪತಿಯಾಗುವುದಿಲ್ಲ. "ನಾನು ಹೋದರೆ," "ಆತನನ್ನು ನಿಮ್ಮ ಬಳಿಗೆ ಕಳುಹಿಸಿಕೊಡುತ್ತೇನೆ" (ಯೋಹಾನ 16:7ಸಿ) ಎಂದು ಆತನು ಹೇಳಿದನು, ಮತ್ತು "ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು" (ಯೋಹಾನ 16:13ಎ).

ಆತನು ಆರೋಹಣವಾಗುವ ಮೊದಲು ಯೇಸು ತನ್ನ ಶಿಷ್ಯರಿಗೆ ಹೇಳಿದನು, "ಇಗೋ ನನ್ನ ತಂದೆಯು ವಾಗ್ದಾನ ಮಾಡಿದ್ದನ್ನು ನಿಮಗೆ ಕಳುಹಿಸಿಕೊಡುತ್ತೇನೆ; ದೇವರ ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಈ ಪಟ್ಟಣದಲ್ಲೇ ಕಾದುಕೊಂಡಿರ್ರಿ" (ಲೂಕ 24:49). ಅವರು ತಪ್ಪಾಗಿ ತಿಳಿದುಕೊಳ್ಳದೆ ಇರಲು, ಆತನು ಇನ್ನು ಹೇಳಿದ್ದೇನೆಂದರೆ, "... ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದುವಿರಿ" (ಅಪೊಸ್ತಲರ ಕೃತ್ಯಗಳು 1:8ಎ). ಯೆರೂಸಲೇಮಿನಲ್ಲಿ ಹತ್ತು ದಿನಗಳು ಕಾಯ್ದರು ನಂತರ ಯೆಹೂದ್ಯರ ಹಬ್ಬವಾದ ಪಂಚಾಶತ್ತಮ ದಿನದಂದು ಪವಿತ್ರಾತ್ಮನು ಬಲವಾಗಿ ಬಂದನು:

> ಪಂಚಾಶತ್ತಮ ದಿನದ ಹಬ್ಬವು ಬಂದಿರಲಾಗಿ ಅವರೆಲ್ಲರು ಏಕಮನಸ್ಸಿಂದ ಒಂದೇ ಸ್ಥಳದಲ್ಲಿ ಕೂಡಿದ್ದರು. ಆಗ ಬಿರುಗಾಳಿ ಬೀಸುತ್ತದೋ ಎಂಬಂತೆ ಪಕ್ಕನೆ ಆಕಾಶದೊಶಗಿಂದ ಒಂದು ಶಬ್ದವುಂಟಾಗಿ, ಅವರು ಕೂಡಿದ್ದ ಮನೆಯನ್ನೆಲ್ಲಾ ತುಂಬಿಕೊಂಡಿತು. ಅದಲ್ಲದೆ ಉರಿಯಂತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ, ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕೂತುಕೊಂಡವು. ಆಗ ಅವರೆಲ್ಲರು ಪವಿತ್ರಾತ್ಮಭರಿತರಾಗಿ ಆತ್ಮ ತಮತಮಗೆ ನುಡಿಯುವ, ಶಕ್ತಿಯನ್ನು ಕೊಡುವ ಪ್ರಕಾರ ಬೇರೆ ಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು (ಅಪೊಸ್ತಲರ ಕೃತ್ಯಗಳು 2:1-4).

ಮೊದಲೆ ಗಮನಿಸಿದಂತೆಯೇ, ಕ್ರಿಸ್ತನು ನಿಜವಾಗಿಯು ಕಿರಿಟ ಧರಿಸಿದ ರಾಜನಾಗಿದ್ದನು ಎಂಬುದನ್ನು ರುಜುವಾತು ಮಾಡಲು ಸಾಕ್ಷಿಯಾಗಿ ಪೇತ್ರನು ಆ ದಿನವೇ ನಡೆದ ಅದ್ಭುತ ಕಾರ್ಯಗಳನ್ನು ಬಳಸಿದನು: "ಆತನು ದೇವರ ಬಲಗೈಯಿಂದ ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟು ವಾಗ್ದಾನವಾಗಿದ್ದ ಪವಿತ್ರಾತ್ಮನನ್ನು, ತಂದೆಯಿಂದ ಹೊಂದಿ ನೀವು ನೋಡಿ ಕೇಳುವುದನ್ನು ಸುರಿಸಿದ್ದಾನೆ" (ಅಪೊಸ್ತಲರ ಕೃತ್ಯಗಳು 2:33). ಪರಿಣಾಮ ಗಮನಿಸಿರಿ: ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮ ಯೇಸು ತಂದೆಯಿಂದ ಸ್ವಿಕರಿಸಿದನು ಮತ್ತು ಆತನು ಆತ್ಮವನ್ನು ತನ್ನ ಅಪೊಸ್ತಲರ ಮೇಲೆ ಕಳುಹಿಸಿದನು.




ಈ ರೀತಿಯಾಗಿ ದೇವರು ಭಾರವುಳ್ಳ ಜವಾಬ್ದಾರಿಯನ್ನು ನೆರವೇರಿಸಲು ಅಪೊಸ್ತಲರನ್ನು ಸಿದ್ಧಮಾಡಿದನು. ಪೇತ್ರನು ಪವಿತ್ರಾತ್ಮನ ಮಾರ್ಗದರ್ಶನದಲ್ಲಿ ಪ್ರಥಮ ಬಾರಿಗೆ ಪರಿಪೂರ್ಣತೆಯುಳ್ಳ ಸುವಾರ್ತೆ ಸಾರಿದನು (ಅಪೊಸ್ತಲರ ಕೃತ್ಯಗಳು 2:14-36). ಪವಿತ್ರಾತ್ಮನ ಮಾರ್ಗದರ್ಶನ ದಡಿಯಲ್ಲಿ ಪೇತ್ರನು ಜನರಿಗೆ ಅವರ ಪಾಪಗಳಿಂದ ಕ್ಷಮಾಪಣೆ ಹೊಂದಲು ಅವರು ಏನು ಮಾಡಬೇಕೆಂದು ಹೇಳಿದನು (ಅಪೊಸ್ತಲರ ಕೃತ್ಯಗಳು 2:37, 38). ಮೂರು ಸಾವಿರ ಜನರು ಕೇಳಿ, ನಂಬಿ, ವಿಧೇಯರಾಗಿ, ರಕ್ಷಿಸಲ್ಪಟ್ಟರು (ಅಪೊಸ್ತಲರ ಕೃತ್ಯಗಳು 2:41, 47)!

ಇಂದು ನಾವು ಸಹ ಆತ್ಮನಿಂದ ಪ್ರೇರೇಪಿಸಲ್ಪಟ್ಟ ವಾಕ್ಯಕೇಳಬಹುದು, ಆತ್ಮನು ಪೇರೇಪಿಸಲ್ಪಟ್ಟ ಸತ್ಯವನ್ನು ನಂಬುತ್ತೇವೆ, ಆತ್ಮನಿಂದ ಹೇಳಲ್ಪಟ್ಟ ಆಜ್ಞೆಗಳಿಗೆ ವಿಧೇಯರಾಗುತ್ತೇವೆ ಮತ್ತು ದೈವ ಪ್ರೇರೆಪಣೆಯಿಂದ ವಾಕ್ಯವನ್ನು ಓದಿ ಅದರಲ್ಲಿರುವ ಆಶೀರ್ವಾದಗಳನ್ನು ಸ್ವಿಕರಿಸಿಕೊಳ್ಳುತ್ತೇವೆ. ಇದಕ್ಕೆಲ್ಲಾ ಕಾರಣವೇನೆಂದರೆ ಯೇಸು "ಮಹಿಮೆಗೆ ಸೇರಿಸಲ್ಪಟ್ಟಿದ್ದಾನೆ"!

## ಮುಕ್ತಾಯ

ಆರೋಹಣದ ಕುರಿತು ಹೇಳಬೇಕಾಗಿದೆಲ್ಲವನ್ನು ಹೇಳಿದ್ದಾರೆಂದು ನಾವು ಹೇಳುವುದಿಲ್ಲ, ನಮ್ಮಲ್ಲಿ ಒಬ್ಬೊಬ್ಬರನ್ನು ಕ್ರೈಸ್ತನ ಭೂಲೋಕದ ಅಂತಿಮ ಜೀವನದ ಕುರಿತು ಹೆಚ್ಚಾಗಿ ಅಭಿನಂದನೆಗೊಳಿಸುವ ಅದರ ಔನತ್ಯದ ಸ್ಥಿತಿಗೆ ನಮ್ಮನ್ನು ಹತ್ತಿರಕ್ಕೆ ತರಲು ನಮಗೆ ಸಾಕಾಗುವಷ್ಟನ್ನು ಹೇಳಿದ್ದಾರೆಂದು ನಿರೀಕ್ಷಿಸುತ್ತೇವೆ. ಯೇಸು ಸದ್ಯದಲ್ಲಿ ಪರಲೋಕದಲ್ಲಿ, ದೇವರ ಬಲಗಡೆ ಇದ್ದುಕೊಂಡು ತನ್ನ ರಾಜ್ಯವನ್ನು ಆಳುತ್ತಿದ್ದಾನೆ, ಸಭೆಯನ್ನು ಆಳುತ್ತಿದ್ದಾನೆ, ಮತ್ತು ನಮಗೋಸ್ಕರ ಮಧ್ಯಸ್ತಗಾರನಾಗಿದ್ದಾನೆ. ಮುಂದಿನ ಮುಕ್ತಾಯದ ಘಟನೆ ಯೇಸುವಿಗಾಗಿ ಮತ್ತು ನಮಗಾಗಿ ಯಾವುದೆಂದರೆ ಆತನ ಎರಡನೆಯ ಬರೋಣ, ಆಗ ನಂಬಿಕೆಯುಳ್ಳವರು ಆತನನ್ನು ಆಕಾಶದಲ್ಲಿ ಬೇಟಿಯಾಗುವರು. ನಾವು ಈ ಅಧ್ಯಯದ ಮುಕ್ತಾಯಕ್ಕೆ ಬರುವಾಗ, ನಮ್ಮನ್ನು ನಾವೇ ಈ ಪ್ರಶ್ನೆಯನ್ನು ಕೇಳಿಕೊಳ್ಳಬೇಕು: "ನಾವು ಎರಡನೇಯ ಬರೋಣಕ್ಕಾಗಿ *ಸಿದ್ಧರಾಗಿದ್ದೆವೋ?*"

ಯೇಸು ಪರಲೋಕಕ್ಕೆ ಹಿಂತಿರುಗಿ ಹೋಗಿದ್ದಾನೆ ಆತನು ಕಿರೀಟ ಧರಿಸಿರುವ ರಾಜನಾಗಿರಬಹುದು. ನಿನ್ನ ಹೃದಯದಲ್ಲಿ ಆತನಿಗೆ ಕಿರಿಟವನಿಟ್ಟಿದ್ದಿಯೋ? ಆತನು ನಿನ್ನ ಜೀವನದ ಕರ್ತನು ಎಂದು ಬಾಯಿಂದ ಅರಿಕೆ ಮಾಡಿದ್ದಿಯೋ? ಮತ್ತು ತಗ್ಗಿದ ವಿಧೆಯತೆಯಿಂದ ನಿನ್ನ ಜೀವಿತವನ್ನು ಆತನಿಗೆ ಒಪ್ಪಿಸಿ ಕೊಟ್ಟಿದ್ದಿಯೋ (ಮಾರ್ಕ 16:15, 16; ಅಪೊಸ್ತಲರ ಕೃತ್ಯಗಳು 2:37, 38)?[20] ನೀನು ಈ ರೀತಿ ಮಾಡದೆ ಇದ್ದಿದ್ದರೆ, ಇಂದು ಸಹ ನೀನು ಮಾಡಬಹುದೆಂದು ನಾನು ಪ್ರಾರ್ಥಿಸುತ್ತೇನೆ. ಕನಿಷ್ಟ ಒಂದು ಆತ್ಮ

ವಿಧೆಯತೆಗೆ ಪ್ರತಿಕ್ರಿಯಿಸಿದರೆ, ಈ ಪಾಠಗಳನ್ನು ಮತ್ತು ಪ್ರಸಂಗಗಳನ್ನು ಎಲ್ಲಾ ಸಮಯವನ್ನು ತೆಗೆದುಕೊಂಡು ಬೇಕಾದ ಪ್ರಯಾಸದಿಂದ ಸಿದ್ಧಪಡಿಸುವುದು ಯೋಗ್ಯವುಳ್ಳದ್ದಾಗಿರುತ್ತದೆ!

## ಸೂಚನೆಗಳು

ಈ ಪ್ರಸಂಗವನ್ನು ಸಿದ್ಧಮಾಡಲು ಅನೇಕ ಮೂಲಗಳಿಂದ ಸಲಹೆಗಳನ್ನು ಪಡೆಯಲಾಗಿತ್ತು, ಆದರೆ ನನ್ನ ಮೂಲ ಸೂಚನೆಗಳು *The Crises of the Christ* ಎಂಬ ಪುಸ್ತಕದಲ್ಲಿನ ಆರೋಹಣ ಎಂಬ ಪಾಠದಿಂದ ಮತ್ತು ಆ ಪುಸ್ತಕದಲ್ಲಿನ ಕೊನೆಯ ಪಾಠಗಳಿಂದ ಪ್ರಾಥಮಿಕವಾಗಿ ಆರಿಸಿಕೊಳ್ಳಲಾಗಿದೆ.[21] ಯಾರಿಗೆ ಗೌರವ ಸಲ್ಲಿಸಬೇಕೋ ಅವರಿಗೆ ಸಲ್ಲಿಸದೆ ಹೋಗಿದ್ದಕ್ಕಾಗಿ ಕ್ಷಮಾಪಣೆ ಕೋರುತ್ತೇನೆ.

ಈ ಪಾಠದೊಂದಿಗೆ ನಾನು ಒಂದು ದೃಶ್ಯಸಾಧನವನ್ನು ಬಳಸುತ್ತೇನೆ. ಪ್ರಸಂಗವು ಮುಂದುವರೆದಂತೆ ಒಂದೊಂದು ಅಂಶವನ್ನು ಸೇರಿಸಿದ್ದೇನೆ. ರೇಖಾಪಟದ ಎಡದಲ್ಲಿ ಆರೋಹಣದ ಬಗ್ಗೆ, ಬಲಗಡೆಯಲ್ಲಿ ಶಿಷ್ಯರ ಮೇಲೆ ಬೀರಿರುವ ಪ್ರಭಾವವನ್ನು ಎತ್ತಿ ತೋರಿಸಲಾಗಿದೆ. "ಕ್ರಿಸ್ತನ ಆರೋಹಣ" ಎಂಬ ರೇಖಾಪಟವು ಅದರ ಸಂಪೂರ್ಣ ಚಿತ್ರವನ್ನು ತೋರಿಸುತ್ತದೆ. ಇದನ್ನು ವಿವರಿಸಲು (¼ ಇಂಚಿನ ಅಳತೆಯಲ್ಲಿರುವ ಕಪ್ಪು ಅಂಚುಕಟ್ಟನ್ನು ಬಳಸಲಾಗಿದೆ) ಪ್ಲ್ಯಾನಲ್‌ನ್ನು ಉಪಯೋಗಿಸಲಾಗಿದೆ. ಏನೇ ಆಗಲಿ ಒಂದು ಸಾಮಾನ್ಯವಾದ ವಿವರಣೆಯನ್ನು (ಚಾರ್ಟ್‌ನಲ್ಲಿ ಬರೆದಿರುವ ಹಾಗೆ) ಒಂದು ಕಾಗದಲ್ಲಿ ಬರೆದು ತೋರಿಸಬಹುದು. ಈ ರೇಖಾಪಟವನ್ನು ಕಪ್ಪು ಹಲಗೆಯ ಬೋರ್ಡ್ ಮೇಲೆ ಹಾಕಿ ತೋರಿಸಬಹುದು. ಈ ಪ್ರಸಂಗದಲ್ಲಿ ಅಂಶದ ವಿಧಾನವನ್ನು ಬಳಸಲಾಗಿದೆ. ಆರೋಹಣದ ಮೇಲೆ ಇರುವ ಮುಖ್ಯವಾದ ವಚನಗಳನ್ನು ತೆಗೆದುಕೊಂಡು ಇನ್ನಷ್ಟು ವಿವರಣೆಯನ್ನು ಕೊಡಬಹುದು.

---


ಟಿಪ್ಪಣಿಗಳು

[1]ಈ ತಲೆಬರಹವನ್ನು 1 ತಿಮೋಥಿ 3:16 ರಿಂದ ತಗೆದುಕೊಳ್ಳಲಾಗಿದೆ. [2]ಲೂಕ 24:39 ಲೇಖನ ನೋಡಿರಿ "ಯೇಸು" ದೇಹದ ಪುನರುತ್ಥಾನ ಈ ಪುಸ್ತಕದ ಪ್ರಾರಂಬದಲ್ಲಿ ನೋಡಿರಿ. [3]"ಎಲ್ಲಾ ವಿಷಯಗಳನ್ನು ಪುನಃ ಸ್ಥಾಪನೆ" ಎನ್ನುವ ಭಾಗವು ಯೇಸುವನ್ನು ಸೂಚಿಸಿ ಆತನು ತಿರುಗಿ ಬಂದಾಗ ಎಲ್ಲಾ ವಿಷಯಗಳನ್ನು ಸರಿಪಡಿಸುತ್ತಾನೆ ಇದು ದೈಹಿಕವಾಗಿಲ್ಲ ಆದರೆ ಆತ್ಮಿಕವಾಗಿ ಸರಿಪಡಿಸುತ್ತಾನೆ. [4]ಯೇಸುವಿನ ಆರೋಹಣ ಮತ್ತು ಜಯವೀರರಾಗಿ ಹೊಗಿರುವವರು ಕುರಿತು ಹೊಸ ಒಡಂಬಡಿಕೆಯಲ್ಲಿ ಹೊಲಿಸಲಾಗಿದೆ, ಇನ್ನೂ ಹೆಚ್ಚಿನ ಆಳವಾದ ವಿವರಣೆಗಾಗಿ ಎಫಸದವರಿಗೆ 4:8ರ ಅಧ್ಯಾಯ ನೋಡಿರಿ "ನೀತಿವಂತರು ಸತ್ಯವಂತರು ನೇರವಾಗಿ ಪರಲೋಕಕ್ಕೆ ಹೊಗುವರು?" ಈ ಪುಸ್ತಕದಲ್ಲಿ ನಂತರ ಕಂಡುಕೊಳ್ಳವಿರಿ. [5]ಈ ಕಿರ್ತನೆ 68:18ರ ವಾಕ್ಯಭಾಗವಾಗಿದೆ. [6]ಈ ಭಾಷೆಯು ಪಿತೃಲೋಕವನ್ನು ಸೂಚಿಸುತ್ತದೆ ಯೇಸು ಮರಣಹೊಂದಿದ ಮೇಲೆ ಆತನು ಎಲ್ಲಿ ಆಳುತ್ತಿದ್ದನು, ಎನ್ನುವ ಚರ್ಚೆಇದಾಗಿದೆ, ಈ ಭಾಗ ನೋಡಿರಿ "ರೋಮನ್‌ರ ಶಿಲುಬೆ ಮೇಲೆ ಆರು ಘಂಟೆಗಳು" ಎನ್ನುವ ಅಧ್ಯಾಯ ಮತ್ತು "ಇತಿಹಾಸದಲ್ಲಿ ಪ್ರಮುಖವಾದ ಮೂರು ದಿನಗಳು" ಇದನ್ನು ಮೊದಲು ಕಂಡುಕೊಳ್ಳಿ ನಂತರ "ಸತ್ತವರು ಎಲ್ಲಿದ್ದಾರೆ" ಎನ್ನುವ ಅಧ್ಯಾಯ ನೋಡಿಕೊಳ್ಳಿರಿ. [7]ಈ ಪದವಿನ್ಯಾಸವು ಕೀರ್ತನೆ 2:9ರಿಂದ ಬಂದಿದೆ ಮೆಶಿಯನ್ ಕೀರ್ತನೆ ಎಂದು ಈಕೀರ್ತನೆ ಕ್ರಿಸ್ತನನ್ನು ಸೂಚಿಸುತ್ತದೆ [8]ಯೇಸು ಪಸ್ಕ ಹಬ್ಬದ ಊಟಮಾಡಿದ ಮೇಲೆ ಅದೆ ದಿನ ಆತನು ಮರಣ ಹೊಂದಿದನು ಯೆಹೊದ್ಯರ ಕಾಲದಲ್ಲಿ (ಭಾನುವಾರದಿಂದ ಭಾನುವಾರದವರೆಗೆ ಲೇಕ್ಕ ಮಾಡುತಿದ್ದರು). ಈ ಪಸ್ಕದಿನಕ್ಕೂ ಮತ್ತು ಪೆಂತಿಗೋಸ್ತ ದಿನಕ್ಕೂ ಮಧ್ಯದಲ್ಲಿ 50 ದಿನಗಳು ಆಗಿರುತ್ತವೆ. (ನೋಡಿ ಯಾಜಕಕಾಂಡ 23:15, 16 ಮತ್ತು ಧರ್ಮೋಪದೇಶಕಾಂಡ 16:9.) [9]ನಿಮಗೆ ಒಲಂಪಿಕ್ ಆಟಗಳ ಕುರಿತು ಆಸಕ್ತಿ ಇರುವುದಾದರೆ "ಸ್ಪರ್ದೆಯನ್ನು ಗೆಲ್ಲುವದು ತುಂಭಾ ಅತ್ಯಾಂತವುಳ್ಳದ್ದೊ ಅಥಾವ ಜಯಶಾಲಿಯಾಗಿ ನಿಂತುಕೊಂಡು ಬಂಗಾರದ ಪದಕ ಸ್ವೀಕರಿಸುವುದು ತುಂಬಾ ಉತ್ಯಂತ ಮಹತ್ವವುಳ್ಳದ್ದೊ ಇವೆರಡರಲ್ಲಿ ಯಾವುದು

ತುಂಬಾ ಅತ್ಯಂತ ಮಹತ್ವವುಳ್ಳದ್ದಾಗಿದೆ?" ಎಂಬುದನ್ನು ಕೇಳಿರಿ. [10]ಮಹತ್ವ ಮನೆಗೆ ಹಿಂತಿರುಗುವ ವಿಷಯದಲ್ಲಿ ನಿಮ್ಮ ಕೇಳುಗರಿಗೆ ಅರ್ಥವಾಗುವದಕ್ಕಾಗಿ ದೃಷ್ಟಾಂತಗಳನ್ನು ಉಪಯೋಗಿಸಿರಿ.

[11]Philip Yancey, *The Jesus I Never Knew* (Grand Rapids, Mich.: Zondervan Publishing House, 1995), 226. [12]ಆ ಹೇಸರು ಏನಾಗಿತ್ತು? ಮುಂದಿನ ಭಾಗದ ವಚನ "ಯೇಸು" ಎನ್ನುವ ಹೆಸರಿತ್ತು ಎಂದು ಸೂಚಿಸುತ್ತದೆ, ಆತನ ಹೆಸರಿನ ವಿಷಯದಲ್ಲಿ ಯಾರಾದ್ರು ಆಕ್ಷೆಪಣೆ ಮಾಡಿದರೆ, ಆತನ ಹೆಸರು ಹುಟ್ಟಿದಾಗಲೆ ಕೊಡಲ್ಪಟ್ಟಿತ್ತು (ಮತ್ತಾಯ 1:21 ನೋಡಿರಿ). ಪೂರ್ವನಿರಿಕ್ಷೆಯಂತೆ ಆತನ ಮರಣ, ಸಮಾಧಿ ಮತ್ತು ಪುನರುತ್ಥಾನವನ್ನು ವಿವರಿಸಿ, ಈ ಸಮಯದಲ್ಲಿ ಆತನು ಬಿಡುಗಡೆಯ ಕಾರ್ಯವನ್ನು ಮಾಡಿ ಮುಗಿಸಿರುವದು ನಿಜವಾಗಿದೆ. [13]ಇಲ್ಲಿ ಸೂಚಿಸಿರುವ ಭಾಷಾಪದವು ಕ್ರಿಸ್ತನು ಪರಲೋಕದ ಮುಖಾಂತರ ಹಾದುಹೊದನು ಪಕ್ಷಿಗಳಿರುವ, ನಕ್ಷತ್ರಗಳಿರುವ ಸ್ಥಳವನ್ನು ದಾಟಿಕೊಂಡು ದೇವರು ಇವರು ಸ್ಥಳವನ್ನು ಮುಟ್ಟಿದನು. [14]ಯೇಸು ನಮ್ಮ ಪಾಪಗಳನ್ನು ಕ್ಷಮಿಸುತ್ತಾನೆ ಮತ್ತು ಸ್ವಯಿಚ್ಛೆಯಿಂದ ಕ್ಷಮಿಸುತ್ತಾನೆ ಎನ್ನುವ ಅರ್ಥವಲ್ಲ, ಆದರೆ ನಮ್ಮ ಹೊರಾಟ ಸರಿಯಾಗಿರುವದನ್ನು ಮಾಡಲು ಹೊರಾಡುತ್ತವೆ ಎನ್ನುವ ವಿಷಯ ಆತನಿಗೆ ಗೊತ್ತು ಎನ್ನುವಂಥದ್ದು ನಮಗೆ ಆದರಣೆ ಕೊಡುತ್ತದೆ. [15]ನನಗೆ ಗೊತ್ತಿರುವಂತೆ ಯೇಸು "ಕುಳಿತುಕೊಳ್ಳುವ" ಬದಲು "ನಿಂತದ್ದಾನೆ" ಎನ್ನುವ ವಿವರಣೆ ಕೊಡುತ್ತದೆ, ಇದೆ ಪ್ರಥಮ ಕ್ರೈಸ್ತರ ಹುತಾತ್ಮರಿಗೆ ಗೌರವವನ್ನು ಸೂಚಿಸುವಂಥದ್ದಾಗಿದೆ. [16]ನಿಮ್ಮ ಕೇಳುಗರು ಇಂದಿನ ದಿನದ ಪಟ್ಟಾಭಿಷೇಕದ ಕುರಿತು ಚೆನ್ನಾಗಿ ಬಲ್ಲವರಾಗಿದ್ದರೆ ಬಹಶಃ ಹಿಂದಿನ ದಿನಗಳ ಹೊಲಿಕೆಗೆ ಅರ್ಥಮಾಡಿಕೊಳ್ಳುವರು (ದೂರದರ್ಶನದ ಮುಂದೆ) ಅನೇಕರು ಹೊಸ ರಾಜನ ಪಟ್ಟಾಭೀಷೇಕ ನೊಡುವುದಿಲ್ಲ, ಪಟ್ಟಾಭೀಷೇಕದ ನಂತರ ಯಾರೊ ಒಬ್ಬರು ಮುಂದೆ ಬಂದು ಈ ಘಟನೆ ಈಗ ನಡೆಯುತ್ತದೆ ಎಂದು ಹೇಳುತ್ತಾರೆ, ಆಗ ಜನರು ಕೊಗುತ್ತಾ ಸಂತೋಷಪಡುತ್ತಾರೆ, ಪೇತ್ರನು ಕೂಡ ಹಾಗೆಯೆ ಮಾಡಿದನು "ಬರುವಂತಹ ಆತ್ಮವು ಅದು ಪರಲೋಕದ್ದು" ಎನ್ನುವ "ಘೋಷಣೆ" ಮಾಡಿದನು ಯೇಸು ರಾಜ್ಯಾಧಿಕಾರವನ್ನು ಹೊಂದುವನು ಎಂದು ಹೇಳಿದನು. [17]ಈ ವಾಕ್ಯಭಾಗವು ಈ ರಾಜ್ಯವು "ಎಂದಿಗೂ ಅಳಿಯದು" ದಾನಿಯಲ್ 7ನೇ ಅಧ್ಯಾಯದಲ್ಲಿ ವಿವರಿಸಲಾಗಿದೆ, ದಾನಿಯಲ್ 2:44ರಲ್ಲಿ ಹೇಳಿದಂತೆ ಅದು ಪ್ರಾಬಲ್ಯವನ್ನು ಹೊಂದಿದೆ, ಎಂದು ಪ್ರವಾದನೆ ಹೇಳಲಾಗಿದೆ, ಮೆಸ್ಸೀಯನ ರಾಜ್ಯಭಾರ, ಸಭೆ ಸ್ಥಾಪನೆ ಕುರಿತು ಹೇಳಿರುವದು, ಈ ವಾಗ್ದಾನ ಕೂಡ ಮತ್ತಾಯ 16:18, 19ರಲ್ಲಿ ಅದೆ ಪ್ರತಿಧ್ವನಿಸುತ್ತದೆ, ಯಾವುದೆ ಬಲವು ಆ ರಾಜ್ಯವನ್ನು ಸಭೆಯನ್ನು ಸೋಲಿಸಲಾರದು ಎಂದು ವರ್ಣಿಸಲಾಗಿದೆ. [18]ಹೊಸ ಒಡಂಬಡಿಕೆಯಲ್ಲಿ ಯೇಸು "ದೇವರು" ಆಗಿದ್ದಾನೆ ಎನ್ನುವ ಆದಾರ ವಾಕ್ಯಗಳನ್ನು ನಾನು ಪಟ್ಟಿ ಮಾಡಿರುವುದಿಲ್ಲ, ಇಲ್ಲಿ ಕೆಲವು ಮಾದರಿಗಳ, ಕೊಡಲಾಗಿದೆ ಅಪೊಸ್ತಲರ ಕೃತ್ಯಗಳು 2:36; ರೋಮಪುರದವರಿಗೆ 1:4; 1 ಕೊರಿಂಥದವರಿಗೆ 8:5, 6; ಯಾಕೋಬ 2:1; ಯೂದನು 4. [19]ಅವರ ಮನಸ್ಸಿನಲ್ಲಿ ಯಾವುದೆ ಪ್ರಶ್ನೆ ಉಳಿದಿದ್ದರೆ ಅದನ್ನು "ಇಬ್ಬರು ಶುಭ್ರವಸ್ತ್ರ ದಾರಿಗಳು" ಅದೆಲ್ಲವನ್ನು ದೂರಮಾಡಲಾಗಿದೆ (ಅಪೊಸ್ತಲರ ಕೃತ್ಯಗಳು 1:10, 11). [20]ಈ ಪ್ರಸಂಗವನ್ನು ನೀನು ಭೋದಿಸುವಾಗ ಅನ್ಯಜನರನ್ನು ದೀಕ್ಷಾಸ್ನಾನಕ್ಕಾಗೆ ಅವರನ್ನು ಆಹ್ವಾನಿಸುವದನ್ನು ಇದರಲ್ಲಿ ಸೇರಿಸಿ ಬೋಧಿಸು, ಅಪನಂಬಿಗಸ್ತ ಕ್ರೆಸ್ತರನ್ನು ತಿರುಗಿ ಬಲಗೊಳ್ಳುವಂತೆ ಪ್ರೋತ್ಸಾಹ ಮಾಡಿ (ಅಪೊಸ್ತಲರ ಕೃತ್ಯಗಳು 8:22; ಯಾಕೋಬ 5:16).

[21]G. Campbell Morgan, *The Crises of the Christ* (New York: Fleming H. Revell Co., 1936), 385–449.


ಕ್ರಿಸ್ತನ ಆರೋಹಣ
ಅಪೊಸ್ತಲರ ಕೃತ್ಯಗಳು 1:6-11; 2:1-4
ಆತ್ಮ
ಕ್ರಿಸ್ತನನ್ನು ಮಹಿಮೆ ಪಡಿಸುವದು
ಮಹಾಯಾಜಕನಂತೆ
ರಾಜನಂತೆ
ಶಿಷ್ಯರು ಸಿದ್ಧತೆಗೊಳ್ಳುವದು
ಜವಾಬ್ದಾರಿ ಬದಲಾಯಿಸಲಾಗಿದೆ
ಆತ್ಮ ಕೊಡಲ್ಪಟ್ಟಿದೆ